## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 935 |
| ಉತ್ತರಿಸುವ ದಿನಾಂಕ | : | 24.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು;<br>(ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಈ ಕೆಳಕಂಡಂತಿವೆ.<br>**1. ರಾಷ್ಟ್ರೀಯ ಜಾನುವಾರು ಮಿಷನ್ (NLM) ಯೋಜನೆ**<br>➢ ಜಾನುವಾರು ವಿಮಾ ಕಾರ್ಯಕ್ರಮ (NLM-LIS)<br>➢ ಆಹಾರ ಮತ್ತು ಮೇವು ಅಭಿವೃಧಿ ಕಾರ್ಯಕ್ರಮ (F & F)<br>➢ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ (NLM-EDP)<br><br>**2. ಜಾನುವಾರು ಆರೋಗ್ಯ ಶಾಖೆಯಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**<br><br>**I. ಕೇಂದ್ರ ಪ್ರಾಯೋಜಿತ:** ಸದರಿ ಯೋಜನೆಯಡಿ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ವರ್ಷದಲ್ಲಿ ಎರಡು ಬಾರಿ ಹಮ್ಮಿಕೊಳ್ಳಲಾಗುವುದು. ಪಿಪಿಆರ್, ಕಂದು ರೋಗ ಮತ್ತು ಕ್ಲಾಸಿಕಲ್ ಸ್ವೈನ್ ಫೀವರ್ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಶೇ. 100 ರಷ್ಟು ಕೇಂದ್ರದ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>**II. ಕೇಂದ್ರ ಪುರಸ್ಕೃತ:**<br>**ಎ) ಆಸ್ಕಾಡ್** – ಲಸಿಕಾ ಕಾರ್ಯಕ್ರಮ (60:40)- ಸದರಿ ಯೋಜನೆಯಡಿ ಗಳಲೆ ರೋಗ, ಚಪ್ಪೆ ರೋಗ, ಕರುಳು ಬೇನೆ, ನೆರಡಿ ರೋಗ, ನೀಲಿನಾಲಿಗೆ ರೋಗ, ರೇಬಿಸ್ ರೋಗಗಳ ವಿರುದ್ಧ ಅರ್ಹ ಜಾನುವಾರುಗಳಿಗೆ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>**ಬಿ) ಆಸ್ಕಾಡ್-** ಪರಿಹಾರ ಧನ ಪಾವತಿ (50:50)- ಸದರಿ ಯೋಜನೆಯಡಿ ಚರ್ಮಗಂಟು ರೋಗ, ಗ್ಲಾಂಡರ್ಸ್ ಮತ್ತು ಹಂದಿ ಜ್ವರದಿಂದ ಮೃತಪಟ್ಟ ಜಾನುವಾರು ಮಾಲೀಕರಿಗೆ ಪರಿಹಾರ ಧನವನ್ನು ವಿತರಿಸಲಾಗುವುದು.<br><br>**ಸಿ) ಆಸ್ಕಾಡ್** – ತರಬೇತಿ ಕಾರ್ಯಕ್ರಮ (100:0)- ಸದರಿ ಯೋಜನೆಯಡಿ ಪಶುವೈದ್ಯರಿಗೆ ಹಾಗೂ ಅರೆ ತಾಂತ್ರಿಕ ಸಿಬ್ಬಂದಿಯವರಿಗೆ ಮತ್ತು ರೈತರಿಗೆ ಜಾನುವಾರುಗಳ ರೋಗ ಮತ್ತು ಚಿಕಿತ್ಸೆಗಳ ಕುರಿತು ತರಬೇತಿ/ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುವುದು.<br><br>**ಡಿ) ಸಂಚಾರಿ ಪಶುಚಿಕಿತ್ಸಾ ಘಟಕ ವಾಹನ (60:40):** ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳ ಮೂಲಕ 1962 ಸಹಾಯವಾಣಿ ಮುಖಾಂತರ ರೈತರ ಮನೆ ಬಾಗಿಲಿಗೆ ಪಶುವೈದ್ಯಕೀಯ ಸೇವೆ ಒದಗಿಸುವುದು. |

<table>
<tr><td></td><td></td><td>

**3. ಸಮಗ್ರ ಮಾದರಿ ಸಮೀಕ್ಷೆ ಯೋಜನೆ (ಕೇಂದ್ರ50% : ರಾಜ್ಯ50%):-**

ಸಮಗ್ರ ಮಾದರಿ ಸಮೀಕ್ಷೆ ಯೋಜನೆಯಡಿ ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಯನ್ನು ಅಂದಾಜಿಸುವುದಾಗಿರುತ್ತದೆ. ಗ್ರಾಮಗಳು ಮತ್ತು ನಗರ ಪ್ರದೇಶದ ವಾರ್ಡ್‌ಗಳನ್ನು ಅನಿಯತವಾಗಿ ಆಯ್ಕೆ ಮಾಡಿ ಸಮೀಕ್ಷೆ ಕಾರ್ಯವನ್ನು ಮೂರು ಋತುಗಳಲ್ಲಿ ಅಂದರೆ ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲದ ಅವಧಿಯಲ್ಲಿ ಕೈಗೊಳ್ಳಲಾಗುತ್ತಿದೆ ಹಾಗೂ ಋತುವಾರು, ವಾರ್ಷಿಕವಾಗಿ ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆಯನ್ನು ಅಂದಾಜಿಸಿ ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

**4. ಜಾನುವಾರು ಗಣತಿ (ಕೇಂದ್ರ 100% ):-**

ಈ ಜಾನುವಾರು ಗಣತಿ ಯೋಜನೆಯನ್ನು ಪ್ರತಿ 5 ವರ್ಷಗಳಿಗೆ ಒಮ್ಮೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ನಡೆಸಲಾಗುತ್ತದೆ. 20ನೇ ಜಾನುವಾರು ಗಣತಿಯನ್ನು ರಾಜ್ಯದಲ್ಲಿ 2019ರ ಅವಧಿಯಲ್ಲಿ ನಡೆಸಲಾಗಿರುತ್ತದೆ. ಜಾನುವಾರು ಗಣತಿಯ ಮುಖ್ಯ ಉದ್ದೇಶ ಜಾನುವಾರುಗಳ ತಳಿವಾರು, ಪ್ರಭೇದವಾರು, ಲಿಂಗವಾರು / ವಯೋಮಾನವಾರು ಮಾಹಿತಿ ಮತ್ತು ಕುಕ್ಕುಟಗಳ ಮಾಹಿತಿಯನ್ನು ಸಂಗ್ರಹಿಸುವುದಾಗಿರುತ್ತದೆ.

</td></tr>
<tr><td>ಆ</td><td>ರಾಜ್ಯದಲ್ಲಿ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)</td><td>ಪೂರ್ಣ ಮಾಹಿತಿಯನ್ನು <u>ಅನುಬಂಧ</u>ದಲ್ಲಿ ನೀಡಲಾಗಿದೆ.</td></tr>
<tr><td>ಇ</td><td>ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ದೊರೆತಿರುವ ನೆರವು ಮತ್ತು ಇತರೆ ಸೌಲಭ್ಯಗಳು ಯಾವುವು?<br>(ಯೋಜನಾವಾರು ಮತ್ತು ವರ್ಷಾವಾರು ಪೂರ್ಣ ಮಾಹಿತಿ ನೀಡುವುದು)</td><td>

ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಕಳೆದ ಮೂರು ವರ್ಷಗಳಿಂದ ದೊರೆತಿರುವ ನೆರವು ಈ ಕೆಳಕಂಡಂತಿದೆ.

<table>
<tr><th rowspan="2">ಕಾರ್ಯಕ್ರಮ</th><th colspan="3">ದೊರೆತಿರುವ ನೆರವು<br>(ರೂ ಲಕ್ಷಗಳಲ್ಲಿ)</th></tr>
<tr><th>2021-22</th><th>2022-23</th><th>2023-24</th></tr>
<tr><td>ಜಾನುವಾರು ವಿಮಾ ಯೋಜನೆ</td><td>-</td><td>1217.15</td><td>333.34</td></tr>
<tr><td>ಆಹಾರ ಮತ್ತು ಮೇವು ಅಭಿವೃದ್ಧಿ ಕಾರ್ಯಕ್ರಮ</td><td>-</td><td>-</td><td>581.71</td></tr>
<tr><td>ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ</td><td>-</td><td>2944.530</td><td>2848.94</td></tr>
</table>

</td></tr>
</table>

**ಇ-ಪಸಂಮೀ 137 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 935 ಕ್ಕೆ

## ಅನುಬಂಧ

### 1. ಜಾನುವಾರು ವಿಮಾ ಕಾರ್ಯಕ್ರಮ (NLM-LIS)

**ಉದ್ದೇಶ:**

1. ಜಾನುವಾರುಗಳ ಆಕಸ್ಮಿಕ ಸಾವಿನಿಂದಾದ ನಷ್ಟಕ್ಕೆ ರೈತರಿಗೆ ಆರ್ಥಿಕ ಸಹಾಯಧನ ರಕ್ಷಣೆ ಒದಗಿಸುವುದು.
2. ಪ್ರೀಮಿಯಂ ಸಹಾಯಧನದ ಅನುಕೂಲವನ್ನು ಪ್ರತಿ ಕುಟುಂಬಕ್ಕೆ ಗರಿಷ್ಟ 10 ಜಾನುವಾರು ಘಟಕಗಳಿಗೆ (10 cattle unit) ಹಾಗೂ ಹಂದಿ ಮತ್ತು ಮೊಲಗಳಿಗೆ ಗರಿಷ್ಟ 5 ಜಾನುವಾರು ಘಟಕ (1 cattle unit=10 ಹಂದಿ/ಮೊಲ ) ಗಳಿಗೆ ನೀಡಬಹುದಾಗಿದೆ.
3. ಎಲ್ಲಾ ವರ್ಗದ ಫಲಾನುಭವಿಗಳು ಪ್ರೀಮಿಯಂ ನ ಒಟ್ಟು ಮೊತ್ತದ ಶೇ.15 ರಷ್ಟು ಫಲಾನುಭವಿಯ ವಂತಿಕೆಯಾಗಿರುತ್ತದೆ ಹಾಗೂ ಶೇ.85 ರಷ್ಟು ಸಹಾಯಧನವಾಗಿ ಈ ಯೋಜನೆಯಡಿಯಲ್ಲಿ ಪಡೆಯಬಹುದಾಗಿದೆ.

| ವಿಮೆಗೆ ಒಳಪಡಿಸ ಬಹುದಾದ ಪ್ರಾಣಿಗಳು | ವಿಮೆಯ ಅವಧಿ | ಪ್ರೀಮಿಯಮ್ ದರ (ವಿಮಾ ಮೊತ್ತಕ್ಕೆ %) |
|---|---|---|
| ಸ್ಥಳೀಯ/ ಮಿಶ್ರತಳಿ ಹಸುಗಳು, (ದನ/ ಎಮ್ಮೆ / ಹೋರಿ / ಎತ್ತು) ಒಂಟೆ / ಕುದುರೆ / ಹಂದಿ / ಕುರಿ / ಮೊಲ/ ಮೇಕೆ / ಕತ್ತೆ /ಯಾಕ್/ಮಿಥುನ್. | **1 year** | 4.45 |
| | **2 year** | 7.92 |
| | **3 year** | 10.92 |

### 2. ಆಹಾರ ಮತ್ತು ಮೇವು ಅಭಿವೃದ್ಧಿ ಕಾರ್ಯಕ್ರಮ(Feed and Fodder)

1. ಪ್ರಮಾಣೀಕೃತ ಮೇವಿನ ಬೀಜಗಳನ್ನು ಮಿನಿ ಕಿಟ್ ಗಳ ರೂಪದಲ್ಲಿ ರೈತರಿಗೆ ಉಚಿತವಾಗಿ ಸರಬರಾಜು ಮಾಡಲಾಗುವುದು.
2. ಮೇವು ಉತ್ಪಾದನೆಯನ್ನು ಉತ್ತೇಜಿಸುವುದು.
3. ಮೇವಿನ ಅಭಾವದ ಸಂದರ್ಭದಲ್ಲಿ ಮೇವು ಲಭ್ಯವಾಗುವಂತೆ ಮಾಡುವುದು.
4. ಹಾಲು ಮತ್ತು ಮಾಂಸ ಉತ್ಪಾದನೆಯನ್ನು ಹೆಚ್ಚಿಸಲು ಪೌಷ್ಟಿಕ ಮತ್ತು ಗುಣಾತ್ಮಕ ಮೇವನ್ನು ಒದಗಿಸುವುದು.

### 3. ರಾಷ್ಟ್ರೀಯ ಜಾನುವಾರು ಮಿಷನ್ (ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ)(NLM-EDP)

ಈ ಯೋಜನೆಯನ್ನು 2021-22ರ ಆರ್ಥಿಕ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ. ಉದ್ಯೋಗ ಸೃಷ್ಟಿ, ಉದ್ಯಮಶೀಲತೆ ಅಭಿವೃದ್ಧಿ, ಜಾನುವಾರು ಉತ್ಪಾದಕತೆಯ ಹೆಚ್ಚಳ ಮತ್ತು ಮಾಂಸ, ಮೇಕೆ ಹಾಲು, ಮೊಟ್ಟೆ ಮತ್ತು ಉಣ್ಣೆಯ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಆಸಕ್ತ ಉದ್ಯಮಿದಾರರು ಈ ಕ್ಷೇತ್ರದಲ್ಲಿ ಸ್ವಯಂ ಸಕ್ರಿಯಗೊಳ್ಳಲು ಹಾಗೂ ಮಾಂಸ, ಮೊಟ್ಟೆ ಮತ್ತು ಉಣ್ಣೆ ಉತ್ಪಾದನೆ ಹೆಚ್ಚಿಸಿ ದೇಶದ ಆತ್ಮನಿರ್ಭರಕ್ಕೆ ಸಹಾಯ ಮಾಡುತ್ತದೆ. ಸದರಿ ಯೋಜನೆಯಡಿ ಈ ಕೆಳಕಂಡಂತೆ ಆರ್ಥಿಕ ಸೌಲಭ್ಯವನ್ನು ಪಡೆಯಬಹುದಾಗಿದೆ.

| ಕಾರ್ಯಕ್ರಮ | ಗರಿಷ್ಟ ಯೋಜನಾ ವೆಚ್ಚ ರೂ.ಗಳಲ್ಲಿ | ಸಹಾಯಧನ ರೂ.ಗಳಲ್ಲಿ |
|---|---|---|
| 1. ಗ್ರಾಮೀಣ ಕೋಳಿ ಉದ್ದಿಮೆ (1000 ದೇಶಿ ಮಾತೃಕೋಳಿ ಘಟಕ + ಹ್ಯಾಚರಿ ಘಟಕ + ಮರಿಗಳ ಸಾಕಾಣಿಕೆ ಘಟಕ) | 50.00 ಲಕ್ಷ | ಶೇ. 50% ರಷ್ಟು ಒಂದು ಘಟಕಕ್ಕೆ ಗರಿಷ್ಟ ರೂ.25 ಲಕ್ಷ |
| 2. ಕುರಿ-ಮೇಕೆ ತಳಿ ಸಂವರ್ಧನಾ ಘಟಕ 500+25 | 1 ಕೋಟಿ | ಶೇ.50% ರಷ್ಟು ಗರಿಷ್ಟ ರೂ 50 ಲಕ್ಷ |
| 400+20 | 80 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 40 ಲಕ್ಷ |
| 300+15 | 60 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 30 ಲಕ್ಷ |
| 200+10 | 40 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 20 ಲಕ್ಷ |
| 100+5 | 20 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 10 ಲಕ್ಷ |
| 3. ಹಂದಿ ತಳಿ ಸಂವರ್ಧನಾ ಘಟಕ 100+10 | 60 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 30 ಲಕ್ಷ |
| 50+5 | 30 ಲಕ್ಷ | ಶೇ.50% ರಷ್ಟು ಗರಿಷ್ಟ ರೂ 15 ಲಕ್ಷ |
| 4. ರಸಮೇವು ಉತ್ಪಾದನಾ ಘಟಕ, ಮೇವು ಬ್ಲಾಕ್ ತಯಾರಿಕಾ ಘಟಕ / ಟಿಎಂಆರ್ ಪ್ಲಾಂಟ್ ಸ್ಥಾಪನೆ ಘಟಕ, (ವಾರ್ಷಿಕ 2000-2500 ಮೆ ಟನ್ ಉತ್ಪಾದನೆ) | 1 ಕೋಟಿ | ಶೇ.50% ರಷ್ಟು ಗರಿಷ್ಟ ರೂ 50 ಲಕ್ಷ |